# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2802

ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ : 29-03-2022

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಚಿಂದಿ ಆಯುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಮಕ್ಕಳ ಮತ್ತು ಮಹಿಳೆಯವರ ಅಂಕಿ ಅಂಶ ಒದಗಿಸುವುದು; | ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಪರಿತ್ಯಜಿಸಲ್ಪಟ್ಟ, ದೌರ್ಜನ್ಯಕ್ಕೊಳಗಾದ, ಅನಾಥ, ಬಾಲ್ಯವಿವಾಹ, ಬಾಲ ಕಾರ್ಮಿಕತೆ, ಭಿಕ್ಷಾಟನೆ, ಬೀದಿಬದಿ ಮಕ್ಕಳು ಮುಂತಾದ ಸಂದಿಗ್ಧ ಪರಿಸ್ಥಿತಿಗೊಳಗಾದ ಮಕ್ಕಳಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರಡಿ, ಮಕ್ಕಳ ಕಲ್ಯಾಣ ಸಮಿತಿಯ ಆದೇಶದೊಂದಿಗೆ ನೋಂದಾಯಿತ ಸರ್ಕಾರಿ ಮತ್ತು ಸರ್ಕಾರೇತರ ಪಾಲನಾ ಸಂಸ್ಥೆಗಳಲ್ಲಿ ಉಚಿತ ವಾಸ್ತವ್ಯ, ಶಿಕ್ಷಣ ಮತ್ತು ಪುನರ್ವಸತಿ ಯನ್ನು ಕಲ್ಪಿಸಲಾಗುತ್ತಿದೆ.<br><br>ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿದ ಮಕ್ಕಳಲ್ಲಿ ಚಿಂದಿ ಆಯುವ ಕಾರ್ಯದಲ್ಲಿ ತೊಡಗಿಸಿಕೊಂಡಂತಹ ಮಕ್ಕಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.<br><br>ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುವ ಮಾಹಿತಿಯಂತೆ ರಾಜ್ಯದ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಚಿಂದಿ ಆಯುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಅಂಕಿಅಂಶಗಳಂತೆ ಮಹಿಳೆಯರ ಸಂಖ್ಯೆ 3195 ಹಾಗೂ ಮಕ್ಕಳ ಸಂಖ್ಯೆ 1099 ಇರುತ್ತದೆ. |
| ಆ) | ಸದರಿಯವರು ಅನುಭವಿಸುತ್ತಿರುವ ಸಮಸ್ಯೆಗಳೇನು; | ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಎಲ್ಲಾ ಮಕ್ಕಳಂತೆ ಚಿಂದಿ ಆಯುವ ಮಕ್ಕಳು ಸಹ ಈ ಕೆಳಕಂಡ ಸಮಸ್ಯೆಗಳನ್ನು ಎದುರಿಸಬೇಕಾಗಿರುತ್ತದೆ.<br>1. ತಂದೆ-ತಾಯಿಯ ಆರೈಕೆ/ಪೋಷಣೆಯಿಂದ ವಂಚಿತರಾಗಿರುತ್ತಾರೆ.<br>2. ಉತ್ತಮ ವಾತಾವರಣದಲ್ಲಿ ಬದುಕುವ ಹಕ್ಕಿನಿಂದ ವಂಚಿತರಾಗಿರುತ್ತಾರೆ.<br>3. ಪೌಷ್ಟಿಕ ಆಹಾರ, ಮಾನಸಿಕ ಬೆಂಬಲ, ಉತ್ತಮ ಆರೋಗ್ಯ ಹಾಗೂ ಸ್ವಚ್ಛತೆಯಿಂದ ವಂಚಿತರಾಗಿರುತ್ತಾರೆ.<br>4. ಶೈಕ್ಷಣಿಕ ಸೌಲಭ್ಯದಿಂದ ವಂಚಿತರಾಗಿರುತ್ತಾರೆ.<br>5. ಮಾದಕ ವಸ್ತುಗಳ ವ್ಯಸನಕ್ಕೊಳಪಟ್ಟಿರುತ್ತಾರೆ.<br>6. ಮಕ್ಕಳ ಸಾಗಾಣಿಕೆ, ಲೈಂಗಿಕ ಶೋಷಣೆ, ಮಾನಸಿಕ ಹಾಗೂ ದೈಹಿಕ ಹಲ್ಲೆಗೊಳಗಾಗಿರುತ್ತಾರೆ. |

| | | |
|---|---|---|
| | | 7. ಸಾಮಾಜಿಕ ಭದ್ರತೆ ಇಲ್ಲದೇ ಇರುವುದು.<br>8. ವಸತಿ ಸೌಲಭ್ಯ ಇಲ್ಲದೇ ಇರುವುದು.<br>9. ಅನಸ್ಥಿರತೆ ಮತ್ತು ಬಡತನ.<br>10. ಅಸುರಕ್ಷಿತ ವಾತಾವರಣದಲ್ಲಿ ಕಾರ್ಯನಿರ್ವಹಿಸುವುದು. |
| ಇ) | ಸದರಿಯವರ ಸ್ಥಿತಿ-ಗತಿ ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಕ್ಕಳ ಸುರಕ್ಷತೆಯು ಸರ್ಕಾರದ ಆದ್ಯತೆಯಾಗಿದ್ದು, ಈ ನಿಟ್ಟಿನಲ್ಲಿ ಮಕ್ಕಳ ರಕ್ಷಣಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಾಗೂ ಮೇಲುಸ್ತುವಾರಿಗಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯವನ್ನು ಪ್ರಾರಂಭಿಸಲು ಘೋಷಿಸಲಾಗಿರುತ್ತದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ:ಮಮಇ 467 ಎಸ್‌ಜೆಡಿ 2017 ದಿನಾಂಕ:15.11.2018ರಲ್ಲಿ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಪ್ರತ್ಯೇಕ ನಿರ್ದೇಶನಾಲಯವನ್ನು ಪ್ರಾರಂಭಿಸಲಾಗಿರುತ್ತದೆ.<br><br>ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು ಪ್ರಾರಂಭಿಸಲಾಗಿದ್ದು, ಈ ಘಟಕಕ್ಕೆ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರಾಗಿದ್ದು, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಕಲಂ 16ರನ್ವಯ ಯೋಜನೆಯ ಸಮರ್ಪಕ ಅನುಷ್ಠಾನದ ಪರಿಶೀಲನಾ ಪ್ರಾಧಿಕಾರವಾಗಿರುತ್ತಾರೆ.<br><br>ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳು, ಚಿಂದಿ ಆಯುವ ಮಕ್ಕಳು, ಬೀದಿಬದಿ ಮಕ್ಕಳು, ಅನಾಥ ಮಕ್ಕಳು ಇಂತಹ ಸನ್ನಿವೇಶಗಳಿಂದ ಬಂದಂತಹ ಮಕ್ಕಳ ಪುನರ್ವಸತಿಗಾಗಿ ತೆರೆದ ತಂಗುದಾಣ ಕಾರ್ಯಕ್ರಮವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನ ಗೊಳಿಸಲಾಗುತ್ತಿದೆ.<br><br>ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಮಕ್ಕಳ ಉಚಿತ ಸಹಾಯವಾಣಿ 1098 ಸಹಯೋಗದೊಂದಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಂದ ಭಿಕ್ಷಾಟನೆ ಹಾಗೂ ಇನ್ನಿತರೆ ಚಟುವಟಿಕೆಗಳಲ್ಲಿ ತೊಡಗಿರುವ ವಿವಿಧ ವಯೋಮಾನದ ಮಕ್ಕಳನ್ನು ರಕ್ಷಿಸಲು ರೆಸ್ಕ್ಯೂ ಆಪರೇಷನ್‌ಗಳನ್ನು ಕೈಗೊಳ್ಳಲಾಗುತ್ತಿದೆ. ಸದರಿ ಮಕ್ಕಳಿಗೆ ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಮೇರೆಗೆ ಪುನರ್ವಸತಿಯನ್ನು ಕಲ್ಪಿಸಲಾಗುತ್ತಿದೆ.<br><br>ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಚಿಂದಿ ಆಯುವ ಮಕ್ಕಳಿಗಾಗಿ ಪ್ರತ್ಯೇಕವಾಗಿ ಯಾವುದೇ ಯೋಜನೆ ಜಾರಿಯಲ್ಲಿರುವುದಿಲ್ಲ. ಇವರನ್ನು ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳೆಂದು ಪರಿಗಣಿಸಿ, ಪಾಲನಾ ಸಂಸ್ಥೆಗಳಲ್ಲಿ ಸಾಂಸ್ಥಿಕ ಸೇವೆಯನ್ನು ಒದಗಿಸಲಾಗುತ್ತಿದೆ.<br><br>ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸ್ವತಂತ್ರ ಶಾಸನಬದ್ಧ ಅಂಗ ಸಂಸ್ಥೆಯಾಗಿರುತ್ತದೆ. ಈ ಆಯೋಗವು ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಂತೆ ಕಾರ್ಯನಿರ್ವಹಿಸುವ ಅಧಿಕಾರವನ್ನು ಹೊಂದಿರುತ್ತದೆ. |

| | | |
|---|---|---|
| | | **ನಗರಾಭಿವೃದ್ಧಿ ಇಲಾಖೆಯಿಂದ ಕೈಗೊಳ್ಳಲಾಗುತ್ತಿರುವ ಕ್ರಮ:-**<br>ಘನತ್ಯಾಜ್ಯ ನಿರ್ವಹಣೆ ನಿಯಮಗಳು 2016ರ ನಿಯಮಗಳ ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆ ಸಂಖ್ಯೆ:ನಅಇ 90 ಸಿಎಸ್‌ಎ 2018, ಬೆಂಗಳೂರು ದಿನಾಂಕ:09-10-2019ರಲ್ಲಿ ಕರ್ನಾಟ ನಗರಪಾಲಿಕೆಗಳ (ಬಿ.ಬಿ.ಎಂ.ಪಿ ಹೊರತುಪಡಿಸಿ) ಹಾಗೂ ಪೌರಸಭೆಗ ಘನತ್ಯಾಜ್ಯ ನಿರ್ವಹಣಾ ಮಾದರಿ ಉಪನಿಯಮಗಳು 2019ರಲ್ಲಿ ತ್ಯಾ ನಿರ್ವಹಣೆಯಲ್ಲಿ ತೊಡಗಿರುವ ಅಸಂಘಟಿತ ವಲಯದ ಕೆಲಸಗಾರರ ಚಿಂದಿ ಆಯುವವರು ಹಾಗೂ ಗುಜರಿ ವ್ಯಾಪಾರಿಗಳಿಗೆ ಸಾಮಾಜಿಕ ಭದ್ರ ಒದಗಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂ ಸೂಚಿಸಲಾಗಿದ್ದು, ದಿನಾಂಕ: 17-03-2022ರ ಪತ್ರದಲ್ಲಿ ಮತ್ತೊಮ್ಮೆ ಇದನ್ನು ಪುನರುಚ್ಚರಿಸಲಾಗಿರುತ್ತದೆ.<br>• ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವತಃ ಅಥವಾ ಪ್ರತಿಷ್ಠಿ ಸರ್ಕಾರೇತರ, ಸಮುದಾಯ ಅಥವಾ ಶೈಕ್ಷಣಿಕ/ಸಂಶೋಧನ ಸಂಘ ಸಂಸ್ಥೆಗಳ ಮೂಲಕ ಚಿಂದಿ ಆಯುವವರನ್ನು ಗುರುತಿಸಿ ಗುರುತಿನ ಚೀಟಿಗಳನ್ನು ವಿತರಿಸಿ ಮತ್ತು ಚಿಂದಿ ಆಯುವವ ದಾಖಲೆಗಳನ್ನು ನಿರ್ವಹಿಸಲು ಕ್ರಮವಹಿಸುವುದು.<br>• ನಗರ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ನಿರ್ವಹ ವ್ಯವಸ್ಥೆಗಳನ್ನು ಸುಧಾರಿಸಲು ಚಿಂದಿ ಆಯುವವರನ್ನು ಒಣ ತ್ಯಾಜ ಸಂಗ್ರಹಣಾ ಕೇಂದ್ರಗಳು ಮತ್ತು ವಸ್ತುಗಳ ಪುನರ್ ಪಡೆಯುವಿ (Material Recovery Facility) ಕೇಂದ್ರಗಳ ತೊಡಗಿಸಿಕೊಳ್ಳುವುದು.<br>• ನಗರ ಸ್ಥಳೀಯ ಸಂಸ್ಥೆಗಳು ಚಿಂದಿ ಆಯುವವರ, ಗುಜ ವ್ಯಾಪಾರಿಗಳ ಮತ್ತು ಸಂಘಟಿತ ಇತರೆ ಕೆಲಸಗಾರರಿ ಪ್ರಮುಖವಾಗಿ ಆರೋಗ್ಯ ಮತ್ತು ಸುರಕ್ಷಾ ಮಾನದಂಡಗಳನ್ವಯ Dry waste management facility ಗಳಲ್ಲಿ ಸುರಕ್ಷಿತವಾ ಹಾಗೂ ಸಾಮರ್ಥ್ಯ ವೃದ್ಧಿ ಕುರಿತಾದ ತರಬೇತಿ ನೀಡಲು ಕ್ರಮವಹಿಸುವುದು.<br>ರಾಜ್ಯದ 218 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಚಿಂದಿ ಆಯುವವರನ್ನು ಗುರುತಿಸಲಾಗಿದ್ದು, 172 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುರುತಿನ ಚೀಟಿಗಳನ್ನು ವಿತರಿಸಲಾಗಿರುತ್ತದೆ. ಹಾಲಿ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ 2420 ಸಂಖ್ಯೆಯ ತ್ಯಾಜ್ಯಾ ಆಯುವವರನ್ನು ಒಣ ತ್ಯಾಜ್ಯಾ ನಿರ್ವಹಣೆಯಲ್ಲಿ ತೊಡಗಿಸಿಕೊಳ್ಳಲಾಗಿರುವುದಾಗಿ ವರದಿಯಾಗಿರುತ್ತದೆ. |
| ಈ) | ವಯಸ್ಸಿಗೆ ಬಂದ ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ವಿವಿಧ ರೀತಿಯ ಅತ್ಯಾಚಾರಗಳನ್ನು ತಪ್ಪಿಸಲು ಸರ್ಕಾರ ಯಾವ ರೀತಿಯ ರಕ್ಷಣಾ ವ್ಯವಸ್ಥೆ ರೂಪಿಸಿದೆ? | 18 ವರ್ಷದೊಳಗಿನ ಮಕ್ಕಳ ಅತ್ಯಾಚಾರ ಪ್ರಕರಣ ತಡೆಗಾಗಿ ಕೇಂದ್ರ ಸರ್ಕಾರವು Protection of children from Sexual Offences Act 2012 and Protection of Children from sexual offences rules 2020 ಕಾಯ್ದೆಯನ್ನು ಜಾರಿಗೊಳಿಸಲಾಗುತ್ತಿದೆ. |

| | | |
|---|---|---|
| | | ಬಾಲ್ಯವಿವಾಹವನ್ನು ತಡೆಗಟ್ಟಲು ಬಾಲ್ಯವಿವಾಹ ನಿಷೇಧ ಕಾಯ್ದೆ 2006ರನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ, ಬಾಲ್ಯ ವಿವಾಹ ನಿಷೇಧ ಹಾಗೂ ಸಮಗ್ರ ಮಕ್ಕಳ ರಕ್ಷಣೆಗಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯನ್ನು ರಚಿಸಲಾಗಿರುತ್ತದೆ.<br><br>ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರನ್ವಯ ಪಾಲನೆ, ರಕ್ಷಣೆ ಮತ್ತು ಪುನರ್ವಸತಿಯನ್ನು ಕಲ್ಪಿಸಲಾಗುತ್ತಿದೆ.<br><br>ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಸೆಕ್ಷನ್ 107 ಮತ್ತು ಮಾದರಿ ನಿಯಮಗಳು 2016ರ ನಿಯಮ 86ರಡಿ ಎಲ್ಲಾ ಜಿಲ್ಲೆಗಳಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು ಸರ್ಕಾರದ ಒಳಾಡಳಿತ ಇಲಾಖೆಯಿಂದ ಆದೇಶ ಸಂಖ್ಯೆ:ಹೆಚ್‌ಡಿ 20 ಪಿಸಿಸಿ 2021 ದಿನಾಂಕ:29.06.2021ರಲ್ಲಿ ರಚಿಸಲಾಗಿರುತ್ತದೆ.<br><br>ಮಕ್ಕಳ ನೆರವಿಗಾಗಿ ಸಂಕಷ್ಟ ಪರಿಸ್ಥಿತಿಗೊಳಗಾದ ಹಾಗೂ ಮಕ್ಕಳಿಗೆ ಸಂಬಂಧಿಸಿದ ನೆರವಿಗಾಗಿ 24X7 ಉಚಿತ ಮಕ್ಕಳ ಸಹಾಯವಾಣಿ ಸಂಖ್ಯೆ 1098ಅನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ. |

**ಸಂಖ್ಯೆ: ಮಮಇ 45 ಮಭಾಬ 2022**

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಅನುಬಂಧ-1

ಚುಕ್ಕೆ ಗುರುತಿನ ಸಂಖ್ಯೆ (CQ-354(2802)ಗೆ ಮಾಹಿತಿ

ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರಡಿ ನೋಂದಾಯಿತ ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಪಾಲನೆ ಮತ್ತು ರಕ್ಷಣೆಗಾಗಿ ದಾಖಲಾಗಿರುವ ಚಿಂದಿ ಆಯುವ ಮಕ್ಕಳ ವಿವರ (ಪ್ರಸ್ತುತ ದಿನಾಂಕ:23.03.2022ರ ಅಂತ್ಯಕ್ಕೆ)

| ಕ್ರಮ ಸಂ | ಜಿಲ್ಲೆಯ ಹೆಸರು | ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರನ್ವಯ ಸರ್ಕಾರಿ/ಸರ್ಕಾರೇತರ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳು | ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ನೋಂದಾಯಿತ ಮಕ್ಕಳ ಪಾಲನಾ ಕೇಂದ್ರಗಳಲ್ಲಿರುವ ಒಟ್ಟು ಮಕ್ಕಳ ಸಂಖ್ಯೆ | ಒಟ್ಟು ಮಕ್ಕಳಲ್ಲಿ ಚಿಂದಿ ಆಯುವ ಪರಿಸ್ಥಿತಿಯಿಂದ ಪಾಲನೆ ಮತ್ತು ರಕ್ಷಣೆಗಾಗಿ ದಾಖಲಾದ ಮಕ್ಕಳ ಸಂಖ್ಯೆ |
|---|---|---|---|---|
| 1 | ಬೆಂಗಳೂರು (ನ) | 160 | 3267 | 3 |
| 2 | ಬೆಂಗಳೂರು (ಗ್ರಾ) | 36 | 368 | 6 |
| 3 | ಬೆಳಗಾವಿ | 39 | 772 | 4 |
| 4 | ಬಾಗಲಕೋಟೆ | 23 | 105 | 0 |
| 5 | ಬಳ್ಳಾರಿ | 33 | 317 | 1 |
| 6 | ಬೀದರ್ | 27 | 215 | 0 |
| 7 | ಚಾಮರಾಜ ನಗರ | 27 | 532 | 0 |
| 8 | ಚಿಕ್ಕಬಳ್ಳಾಪುರ | 15 | 138 | 1 |
| 9 | ಚಿಕ್ಕಮಗಳೂರು | 24 | 262 | 0 |
| 10 | ಚಿತ್ರದುರ್ಗ | 20 | 112 | 9 |
| 11 | ದಕ್ಷಿಣ ಕನ್ನಡ | 75 | 2387 | 0 |
| 12 | ದಾವಣಗೆರೆ | 18 | 161 | 8 |
| 13 | ಧಾರವಾಡ | 29 | 490 | 0 |
| 14 | ಗದಗ | 18 | 423 | 0 |
| 15 | ಹಾಸನ | 31 | 511 | 1 |
| 16 | ಹಾವೇರಿ | 34 | 146 | 15 |
| 17 | ಕಲ್ಬುರ್ಗಿ | 15 | 349 | 11 |
| 18 | ಕೊಡಗು | 16 | 69 | 0 |
| 19 | ಕೋಲಾರ | 33 | 404 | 1 |
| 20 | ಕೊಪ್ಪಳ | 12 | 268 | 0 |
| 21 | ಮಂಡ್ಯ | 20 | 1117 | 9 |
| 22 | ಮೈಸೂರು | 57 | 1385 | 1 |
| 23 | ರಾಯಚೂರು | 36 | 1284 | 0 |
| 24 | ರಾಮನಗರ | 13 | 365 | 3 |
| 25 | ಶಿವಮೊಗ್ಗ | 39 | 358 | 0 |
| 26 | ತುಮಕೂರು | 20 | 690 | 5 |
| 27 | ಉಡುಪಿ | 27 | 639 | 0 |
| 28 | ಉತ್ತರ ಕನ್ನಡ | 42 | 59 | 0 |
| 29 | ವಿಜಯಪುರ | 25 | 438 | 0 |
| 30 | ಯಾದಗಿರಿ | 8 | 67 | 0 |
| | ಒಟ್ಟು | 972 | 17698 | 78 |

ಯೋಜನಾ ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು